# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2022 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 17.03.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಮೆಟ್ರೋ ನಿಗಮವು ಕಾಮಗಾರಿಯನ್ನು ಕೈಗೊಳ್ಳುವ ಮುಖ್ಯ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯ ಒಳಚರಂಡಿ ಪೈಪ್‌ಗಳಿಗೆ ಹಾನಿಯನ್ನುಂಟು ಮಾಡಿ ದುರಸ್ಥಿಗೊಳಿಸದೆ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಸರ್ಕಾರ ಕೈಗೊಂಡಿರುವ ಮುನ್ನೆಚರಿಕಾ ಕ್ರಮಗಳೇನು; | ಬೆಂಗಳೂರು ಮೆಟ್ರೋ ರೈಲು ನಿಗಮವು ಕಾಮಗಾರಿ ಕೈಗೊಳ್ಳುವ ಮೊದಲು ಮುನ್ನೆಚ್ಚರಿಕಾ ಕ್ರಮವಾಗಿ ಸೀಮಿತ ಕಾಮಗಾರಿಯ ಪ್ರದೇಶದಲ್ಲಿ ಮ್ಯಾನ್ಯುಲ್ ಯುಟಿಲಿಟಿ ಟ್ರೆಂಚಿಂಗ್, ಮಾಡಿ ಯಾವುದೇ ಪೈಪ್ ಲೈನ್ ಇದೆಯ ಅಥವಾ ಇಲ್ಲವೆಂದು ಖಚಿತಪಡಿಸಿದ ಮೇಲೆಯೇ ಮುಂದಿನ ಮೆಟ್ರೋ ಕಾಮಗಾರಿ ಕೈಗೊಳ್ಳಲಾಗುತ್ತದೆ. ಆದ್ದರಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಯಾವುದೇ ಒಳಚರಂಡಿ ಪೈಪ್‌ಗಳಿಗೆ ಹಾನಿಯಾಗುವುದಿಲ್ಲ.<br><br>ಬೆಂಗಳೂರು ನಗರದಲ್ಲಿ ಮೆಟ್ರೋ ನಿಗಮವು ಕಾಮಗಾರಿಯನ್ನು ಕೈಗೊಳ್ಳುವ ಮುಖ್ಯ ರಸ್ತೆಗಳಲ್ಲಿ ಬೆಂಗಳೂರು ಜಲಮಂಡಳಿಯ ಒಳಚರಂಡಿ ಪೈಪ್‌ಗಳಿಗೆ ಹಾನಿಯನ್ನುಂಟು ಮಾಡಿ ದುರಸ್ಥಿಗೊಳಿಸದೆ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದರ ಬಗ್ಗೆ ಯಾವುದೇ ಪ್ರಕರಣಗಳು ಬೆಂಗಳೂರು ಜಲಮಂಡಳಿಯ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಬೆಂಗಳೂರು ನಗರದ ಜೆ.ಪಿ ನಗರದ ವೇಗಾ ಸಿಟಿ ವೃತ್ತದ (ಬನ್ನೇರು ಘಟ್ಟ ರಸ್ತೆ) ಮಂತ್ರಿ ಎಲೀಟ್ ಅಪಾರ್ಟ್‌ಮೆಂಟ್ ಸಮೀಪ ಕಳೆದ 10 ತಿಂಗಳುಗಳಿಂದ ಒಳಚರಂಡಿಯ ಪೈಪ್ ಹಾನಿಗೊಳಗಾಗಿದ್ದು, ದುರಸ್ಥಿ ಕಾರ್ಯವನ್ನು ಮೆಟ್ರೋ ನಿಗಮ ಅಥವಾ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ಯಾವುದೇ ಕ್ರಮ ಕೈಗೊಳ್ಳದಿರುವುದು ವರದಿಯಾಗಿದೆಯೇ; | ಜೆ.ಪಿ ನಗರದ ಡಾಲರ್ಸ್ ಬಡಾವಣೆಯಿಂದ 600 ಎಂ ಎಂ ವ್ಯಾಸದ ಕೊಳವೆ ಮಾರ್ಗವು ಹಾದು ಹೋಗಿದ್ದು, ಕೊಳವೆ ಮಾರ್ಗವು ತುಂಬಾ ಹಳೆಯ ಎಸ್.ಪಿ-2 ಕೊಳವೆ ಮಾರ್ಗವಾಗಿದ್ದು, ಸುಮಾರು ಕಡೆ ಕುಸಿತ ಉಂಟಾಗಿರುತ್ತದೆ. ಈ ಸಂಬಂಧ ಬೆಂಗಳೂರು ಜಲಮಂಡಳಿಯು ಕಾಮಗಾರಿ ಕೈಗೆತ್ತಿಕೊಳ್ಳಲು ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ದಿನಾಂಕ:29.10.2021 ರಂದು ನೀಡಲಾಗಿರುತ್ತದೆ ಹಾಗೂ ರಸ್ತೆ ಅಗೆಯಲು ಅನುಮತಿ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ MARCS (No. 18426 dt:08.11.2021) ಮುಖಾಂತರ ಬೆಂಗಳೂರು ಜಲಮಂಡಳಿಯಿಂದ ಕೋರಿಕೆ ಸಲ್ಲಿಸಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುಮತಿ ದೊರೆತ ನಂತರದಲ್ಲಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು. |
| ಇ) | ಮೆಟ್ರೋ ಕಾಮಗಾರಿಯನ್ನು ಕೈಗೊಳ್ಳುವ ರಸ್ತೆಗಳಲ್ಲಿ ದುರಸ್ಥಿ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿ ಯಾವ ಇಲಾಖೆಗೆ ಒಳಪಡುತ್ತದೆ; ಒಳಚರಂಡಿ ಪೈಪ್‌ಗಳನ್ನು ದುರಸ್ಥಿಗೊಳಿಸಲು ನಿಗಧಿಗೊಳಿಸಿರುವ ಕಾಲಾವಧಿಯೆಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು) | ಮೆಟ್ರೋ ಕಾಮಗಾರಿ ಕೈಗೊಂಡ ಸ್ಥಳದಲ್ಲಿ ಕಾಮಗಾರಿ ಮುಕ್ತಾಯವಾಗುವವರೆಗೂ ಬೆಂಗಳೂರು ಮೆಟ್ರೋ ರೈಲು ನಿಗಮವು ದುರಸ್ಥಿ ಕಾರ್ಯವನ್ನು ನಿರ್ವಹಿಸುತ್ತದೆ. ಕಾಮಗಾರಿಯು ಮುಕ್ತಾಯವಾದ ನಂತರ ರಸ್ತೆ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹಾಗೂ ಒಳಚರಂಡಿ ಪೈಪ್‌ಗಳ ದುರಸ್ಥಿಯನ್ನು ಬೆಂಗಳೂರು ಜಲಮಂಡಳಿಯು ತಕ್ಷಣ ನಿರ್ವಹಿಸುತ್ತಾರೆ.<br><br>ಮೆಟ್ರೋ ಕಾಮಗಾರಿಗಳಲ್ಲಿ ಯಾವುದಾದರೂ ಬೆಂಗಳೂರು ಜಲಮಂಡಳಿಯ ಕೊಳವೆ ಮಾರ್ಗಗಳ ಬದಲಾವಣೆ/ದುರಸ್ಥಿ ಕಾಮಗಾರಿಗಳು ಬಂದ ಪಕ್ಷದಲ್ಲಿ ಅಂತಹ ಕಾಮಗಾರಿಗಳನ್ನು ಬೆಂಗಳೂರು ಜಲಮಂಡಳಿಯು ಮೆಟ್ರೋ ನಿಗಮದ ಠೇವಣಿ-ಕೊಡುಗೆ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಈ ರೀತಿಯ ಕಾಮಗಾರಿಗಳನ್ನು ಅವುಗಳ ಪ್ರಮಾಣದ ಪ್ರಕಾರ ಕಾಲಾವಧಿಗಳನ್ನು ನಿಗದಿಪಡಿಸಿ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ನಅಇ 34 ಎಂಎನ್‌ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ